ಕೊಟ್ಟಿರತಕ್ಕಂಥ ಹಣ ಕಡಿಮೆ ಇದೆ ಎನ್ನುವುದರ ಬಗ್ಗೆ ಇಲ್ಲಿ ಚರ್ಚೆ ಆಗಬೇಕು ಎಂದು ಕೇಳುತ್ತಿದ್ದೇವೆ.

ಉಪಾಧ್ಯಕ್ಷರು: ಈಗ ದಯಮಾಡಿ ತಾವು ನೋಟೀಸ್ ಕಳುಹಿಸಿಕೊಡಿ. ಈಗ ಆ ವಿಷಯ ಚರ್ಚೆ ಮಾಡಿ ಮುಗಿದುಹೋಗಿದೆ. ಮುಕ್ತಾಯಗೊಂಡ ವಿಚಾರವನ್ನು ಮತ್ತೆ ಪ್ರಸ್ತಾಪ ಮಾಡವುದು ಬೇಡ.

ಶ್ರೀ ಎಲ್.ಆರ್.ಶಿವರಾಮೇಗೌಡ: ಮಾನ್ಯ ಉಪಾಧ್ಯಕ್ಷರೆ, ಕಾವೇರಿ ಕಣಿವೆಯ ಇಡೀ ಶಾಸಕರ ಸಮೂಹವೇ ಎದ್ದು ನಿಂತು ಇದಕ್ಕೆ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಕೇಳಿದಾಗ ತಾವು ಇದರ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೀರಿ. ಈಗ ಪುನಃ ನೋಟೀಸ್ ಕೊಡಿ ಎಂದು ಕೇಳಿದರೆ ಹೇಗೆ?

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಕಾವೇರಿ ವಿಚಾರಕ್ಕೆ ಸಂಬಂಧಪಟ್ಟ ಹಾಗೆ ಬೆಳಿಗ್ಗೆ ಚರ್ಚೆಯಾಗಿದೆ. ಈಗ ಬೇಡಿಕೆ ಮೇಲೆ ಮಾನ್ಯ ವಾಟಾಳ್ ನಾಗರಾಜು ಮುಂತಾದವರು ಮಾತನಾಡಿ ನಂತರ ಸರ್ಕಾರದಿಂದ ಉತ್ತರ ಕೊಡುವಂಥದ್ದು ಈಗಿನ ಅಜೆಂಡಾ ಆಗಿರುತ್ತದೆ. ಬಾಕಿ ಇರತಕ್ಕಂಥ ವಿಚಾರಕ್ಕೆ ಪ್ರತ್ಯೇಕವಾಗಿ ನೋಟೀಸ್ ಕಳುಹಿಸಿಕೊಡಲಿ, ಅದಕ್ಕೆ ನಾಳೆ ಅಥವಾ ನಾಡಿದ್ದು ಯಾವತ್ತಾದರೂ ಸರಿ ಅವಕಾಶ ಕೊಡಿ. ಈಗ ಬೇಡಿಕೆ ಮೇಲೆ ಚರ್ಚೆಯಾಗದೆ ಇತರೇ ವಿಚಾರಗಳ ಮೇಲೆ ಚರ್ಚೆಯಾಗುತ್ತಿದ್ದರೆ ಕೊನೆಯಲ್ಲಿ ಗೊಂದಲವಾಗುತ್ತದೆ ಎಂಬುದು ಬಹುಶಃ ಮಾನ್ಯ ಸದಸ್ಯರಿಗೆಲ್ಲಾ ಗೊತ್ತಿದೆ. ಅಂಥ ಪರಿಸ್ಥಿತಿ ನಿರ್ಮಾಣವಾಗದ ಹಾಗೆ ಬೇಡಿಕೆ ಮೇಲೆ ಚರ್ಚೆ ಮುಂದುವರೆದು ಸರ್ಕಾರದಿಂದ ಉತ್ತರ ಕೊಡುವುದಕ್ಕೆ ಅವಕಾಶ ಮಾಡಿಕೊಡಿ. ಬಾಕಿ ಇರತಕ್ಕಂಥ ವಿಚಾರಗಳು ಏನಿವೆ ಅವನ್ನು ನಾಳೆ ಅಥವಾ ನಾಡಿದ್ದು ಚರ್ಚೆಗೆ ತೆಗೆದುಕೊಳ್ಳೋಣ.

ಶ್ರೀ ಎಲ್.ಆರ್.ಶಿವರಾಮೇಗೌಡ: ಮಾನ್ಯ ಉಪಾಧ್ಯಕ್ಷರೆ, ಈ ವಿಚಾರಕ್ಕೆ ನಾಳೆ ಅಥವಾ ನಾಡಿದ್ದು ಯಾವತ್ತಾದರೂ ಬೇರೆ ಸಮಯದಲ್ಲಿ ಅವಕಾಶ ಕೊಡುವುದಾದರೆ ನಮ್ಮದೇನೂ ಅಭ್ಯಂತರವಿಲ್ಲ. ದಯವಿಟ್ಟು ಇದರ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡಬೇಕು. ಇಡೀ ಕಾವೇರಿ ಕಣಿವೆಯಲ್ಲಿರತಕ್ಕಂಥ ಎಲ್ಲಾ ಶಾಸಕರುಗಳ ಜೀವನ್ಮರಣದ ಪ್ರಶ್ನೆಯಾಗಿದೆ.

ಉಪಾಧ್ಯಕ್ಷರು: ನೀವು ನೋಟೀಸ್ ಕಳುಹಿಸಿಕೊಡಿ, ಅವಕಾಶ ಮಾಡಿಕೊಡುತ್ತೇನೆ.

(ಉ) ಬೆಂಗಳೂರು ನೀರು ಸರಬರಾಜು ಯೋಜನೆಗೆ ತಮಿಳುನಾಡು ಸರ್ಕಾರದ ವಿರೋಧ.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಉಪಾಧ್ಯಕ್ಷರೆ, ಇದು ಬಹಳ ಮುಖ್ಯವಾದ ವಿಚಾರ. ಬೆಂಗಳೂರು ನಗರಕ್ಕೆ ಕುಡಿಯುವ ನೀರನ್ನು ಪೂರೈಸುವ

ಕಾವೇರಿ 4ನೇ ಹಂತದ ಯೋಜನೆಗೆ ನೆರವು ನೀಡಬಾರದೆಂದು ತಮಿಳುನಾಡಿನ ಮುಖ್ಯಮಂತ್ರಿಯವರು ಜಪಾನ್ ಸಾಗರೋತ್ತರ ಆರ್ಥಿಕ ಸಹಕಾರ ನಿಧಿಗೆ ಒಂದು ಪತ್ರವನ್ನು ಬರೆಸಿದ್ದಾರೆ. ಇದು ಬಹಳ ಗಂಭೀರವಾಗಿರತಕ್ಕಂಥ ವಿಷಯ. ಮೊದಲನೆಯದಾಗಿ ಇದನ್ನು ತಮಿಳುನಾಡಿನವರು ಮಾನವೀಯತೆಯ ದೃಷ್ಟಿಯಿಂದ ನೋಡಬೇಕಿತ್ತು. ಕೃಷ್ಣಾದಿಂದ ತಮಿಳುನಾಡಿಗೆ ಕುಡಿಯುವ ನೀರು ಕೊಡಬೇಕಾದರೆ ಮಾನವೀಯತೆಯ ದೃಷ್ಟಿಯಿಂದ ನಾವು 5 ಟಿ.ಎಂ.ಸಿ. ನೀರನ್ನು ಕೊಟ್ಟು ತ್ಯಾಗಮಾಡಿದ್ದೇವೆ. ಆಂಧ್ರದವರು ಮತ್ತು ಮಹರಾಷ್ಟ್ರದವರು ಕೂಡ ಕುಡಿಯುವ ನೀರಿಗೋಸ್ಕರ ಅವರಿಗೆ ಸಹಾಯ ಮಾಡಿದ್ದಾರೆ. ಈ ಕರುಣಾನಿಧಿಯವರು ಕರ್ನಾಟಕದ ಬಗ್ಗೆ ಅಪಾರವಾದ ಗೌರವವನ್ನು ಇಟ್ಟುಕೊಂಡು ಅನೇಕ ಸಲ ನಮ್ಮ ಮುಖ್ಯಮಂತ್ರಿಯವರನ್ನು, ನೀರಾವರಿ ಸಚಿವರನ್ನು ಕರೆದು ಮಾತನಾಡಿಸಿ, ಇನ್ನು ಕಾವೇರಿ ಸಮಸ್ಯೆ ಬಗೆಹರಿದು ಹೋಯಿತು ಎನ್ನತಕ್ಕಂಥ ಒಂದು ಸಂದರ್ಭ ನಿರ್ಮಾಣವಾಯಿತು. ಆದರೆ ಅದು ರಾಜಕೀಯ ದೃಷ್ಟಿಯಿಂದ ಕೊನೆಗೆ ಮಾತುಕತೆ ಮುರಿದುಬಿತ್ತು. ಈಗ ಇದ್ದಕ್ಕಿದ್ದ ಹಾಗೆ ಜಪಾನಿನ ಆರ್ಥಿಕ ಸಂಸ್ಥೆಗೆ ಬೆಂಗಳೂರಿನ ಕುಡಿಯುವ ನೀರಿನ ವ್ಯವಸ್ಥೆಗೆ ಹಣವನ್ನು ಕೊಡಬಾರದೆಂದು ಹೇಳತಕ್ಕಂಥದ್ದು, ಒಂದು ರಾಜ್ಯದ ಮುಖ್ಯಮಂತ್ರಿಯಾಗಿ ಬೇರೆ ದೇಶಕ್ಕೆ ಪತ್ರ ಬರೆಯುವಂಥದ್ದು ಸರಿಯಲ್ಲ. ಇದು ಅಕ್ಷಮ್ಯ ಅಪರಾಧವಾಗುತ್ತದೆ. ಇದನ್ನು ಲೆಕ್ಕಾಚಾರವಾಗಿ ನೋಡಿದರೆ ಈ ಭಾರತ ದೇಶದ ಒಕ್ಕೂಟದಲ್ಲಿ ಆ ತಮಿಳುನಾಡು ಸರ್ಕಾರವನ್ನು ನೇರವಾಗಿ ವಜಾ ಮಾಡಬೇಕು ಎಂದು ನನಗನಿಸುತ್ತದೆ. ಶ್ರೀ ಕರುಣಾನಿಧಿಯವರು ತಮ್ಮ ರಾಜ್ಯಕ್ಕೋಸ್ಕರ, ಶ್ರೀಮತಿ ಜಯಲಲಿತಾರವರ ರಾಜಕೀಯಕ್ಕೋಸ್ಕರ, ತಮ್ಮ ರಾಜಕೀಯವನ್ನು ಬೆಳೆಸುವುದಕ್ಕೋಸ್ಕರ ಕರ್ನಾಟಕವನ್ನು ಭೂಮಿಕೆ ಮಾಡಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಇವರ ರಾಜಕೀಯಕ್ಕೋಸ್ಕರ ಕರ್ನಾಟಕವನ್ನು ಬಲಿ ಕೊಡುವುದಕ್ಕಾಗುವುದಿಲ್ಲ. ನಮ್ಮ ರಾಜ್ಯದಲ್ಲಿ ರಾಜಕೀಯಕ್ಕೋಸ್ಕರ ಇದು ಒಂದು ಅಪಾಯಕಾರಿಯಾದ ಬೆಳವಣಿಗೆಯಾಗಿದೆ. ಬೆಂಗಳೂರಿನ ಕುಡಿಯುವ ನೀರಿಗೆ 4ನೇ ಯೋಜನೆ ಈಗಾಗಲೇ ಆರಂಭವಾಗಿದ್ದು ಇದಕ್ಕೆ ಜಪಾನ್ ದೇಶ ಹಣವನ್ನು ಕೊಡುವುದಕ್ಕೆ ಸಿದ್ದರಾಗಿದ್ದಾರೆ. ಇದು 1072 ಕೋಟಿ ರೂಪಾಯಿಗಳ ಯೋಜನೆಯಾಗಿರುತ್ತದೆ. ನಾವು ಅವರಿಂದ 804 ಕೋಟಿ ರೂಪಾಯಿಗಳ ಸಹಾಯವನ್ನು ಕೇಳಲಾಗಿದೆ. ತಮಿಳುನಾಡಿನ ಸರ್ಕಾರದವರು ಮಾಡಿದಂಥ ಅಕ್ಷಮ್ಯ ಅಪರಾಧಕ್ಕೆ ಸರ್ಕಾರ ಏನು ಕ್ರಮ ಕೈಗೊಂಡಿದೆ? ಇದರ ಬಗ್ಗೆ ಸರ್ಕಾರ ಪತ್ರವೇನಾದರೂ ಬರೆದಿದೆಯೇ ಅಥವಾ ಪ್ರತಿಭಟನೆ ಮಾಡಿದ್ದಾರೆಯೇ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕು. ಈ ವಿಚಾರವನ್ನು ಅಷ್ಟು ಸುಲಭದಲ್ಲಿ ಬಿಡತಕ್ಕಂಥದ್ದಲ್ಲ. ಇದು ಇಡೀ ರಾಜ್ಯದ ಜನತೆಗೆ ಸಂಬಂಧಪಟ್ಟಂಥ ವಿಚಾರ. ಬೆಂಗಳೂರಿನಲ್ಲಿರುವ 50 ಲಕ್ಷ ಜನರ ಮೇಲೆ ಇದರ ಪರಿಣಾಮ ಉಂಟಾಗುತ್ತದೆ. ಇದರ ಬಗ್ಗೆ ಸರ್ಕಾರ ಏ

ಕ್ರಮ ತೆಗೆದುಕೊಂಡಿದೆ ಎಂಬುದನ್ನು ಸಂಬಂಧಪಟ್ಟ ಮಂತ್ರಿಗಳಿಗೆ ತಮ್ಮ ಮೂಲಕ ಕೇಳುತ್ತಿದ್ದೇನೆ.

ಶ್ರೀ ಕೆ.ಎನ್.ನಾಗೇಗೌಡ: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜು ರವರು ಪ್ರಸ್ತಾಪ ಮಾಡಿರತಕ್ಕಂಥ ವಿಚಾರ ಅತ್ಯಂತ ಗಂಭೀರ ವಾದಂಥದ್ದು ಎಂದು ಸರ್ಕಾರ ಪರಿಗಣಿಸಿದೆ. ಬೆಂಗಳೂರು ನೀರು ಸರಬರಾಜು ಮಂಡಳಿಗೆ ಕಾವೇರಿ ನದಿಯಿಂದ 9 ಟಿ.ಎಂ.ಸಿ. ನೀರನ್ನು ಕೊಡಬೇಕೆಂದು ಒಂದು ಯೋಜನೆಯನ್ನು ಸಿದ್ದಪಡಿಸಿ ಕೇಂದ್ರ ಸರ್ಕಾರದ ಜಲಸಂಪನ್ಮೂಲ ಖಾತೆಯ ಸಚಿವರಿಗೆ ಕೂಡ ಕಾಗದ ಬರೆದು ಅವರ ಅನುಮತಿಯನ್ನು ಪಡೆದುಕೊಂಡು, ನಾವು ಒ.ಇ.ಸಿ.ಎಫ್. ಜಪಾನ್‌ನಿಂದ ಈ ಯೋಜನೆಯ ಸಲುವಾಗಿ ನೆರವು ಪಡೆಯಲು ಸಿದ್ದತೆ ಮಾಡಿದ್ದು, ಅವರು ನೆರವು ಕೊಡತಕ್ಕಂಥ ಹಂತದಲ್ಲಿರುವಾಗ ತಮಿಳುನಾಡಿನ ಮುಖ್ಯಕಾರ್ಯದರ್ಶಿಯವರು ಜಪಾನ್ ಸಂಸ್ಥೆಗೆ ಕಾಗದ ಬರೆದಿರತಕ್ಕಂಥದ್ದು ತೀವ್ರ ದಿಗ್ಭ್ರಮೆ ತರತಕ್ಕಂಥ ವಿಚಾರವಾಗಿದ್ದು, ಇದನ್ನು ದೇಶದ ಒಕ್ಕೂಟಕ್ಕೆ ಕೆಟ್ಟದ್ದಾಗುವ ಪರಿಣಾಮದಲ್ಲಿ ಮಾಡಿದ್ದಾರೆ ಎನ್ನತಕ್ಕಂಥದ್ದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಮತ್ತು ನಾವು ಕಳೆದ ಮಂತ್ರಿಮಂಡಲದಲ್ಲಿ ಸುದೀರ್ಘವಾಗಿ ಚರ್ಚೆ ಮಾಡಿ, ಒಂದು ರಾಜ್ಯವಾಗಿ ಅದು ತಾನು ಒಂದು ದೇಶವೆಂದು ಭಾವಿಸಿಕೊಂಡು ಆ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. A State cannot act as an independent country. ಇದರ ಬಗ್ಗೆ ತೀವ್ರ ಪ್ರತಿಭಟನೆ ಮಾಡಿ ನಮ್ಮ ಮಾನ್ಯ ಮುಖ್ಯಮಂತ್ರಿಯವರು ಮಾನ್ಯ ಪ್ರಧಾನಮಂತ್ರಿಯವರಿಗೆ ಮತ್ತು ಶ್ರೀ ಕರುಣಾಧಿಯವರಿಗೆ ಪತ್ರ ಬರೆದಿದ್ದಾರೆ. ಮಾನ್ಯ ಸದಸ್ಯರು ಹೇಳಿದ ಹಾಗೆ ನ್ಯಾಷನಲ್ ವಾಟರ್ ಪಾಲಿಸಿ ಪ್ರಕಾರ ಕುಡಿಯುವ ನೀರಿಗೆ ನಾವು ಟಾಪ್ ಪ್ರೈಯಾರಿಟಿ ಕೊಟ್ಟಿದ್ದೇವೆ. ತೆಲಗುಗಂಗಾ ವಿಚಾರ ಬಂದಾಗ ಕರ್ನಾಟಕಕ್ಕೆ ದೊರೆತಿರತಕ್ಕಂಥ 734 ಟಿ.ಎಂ.ಸಿ. ನೀರಿನಲ್ಲಿ ತಮಿಳುನಾಡಿನವರು ನಮ್ಮ ರಾಷ್ಟ್ರದ ಜನರು ಎಂದು ಹೇಳಿ ನಮ್ಮ ರಾಜ್ಯದ ಶೇರ್‌ನಿಂದ 5 ಟಿ.ಎಂ.ಸಿ. ನೀರನ್ನು ಮಾನವೀಯತೆಯ ದೃಷ್ಟಿಯಿಂದ ತಮಿಳುನಾಡಿಗೆ ಕುಡಿಯುವ ನೀರನ್ನು ಕೊಟ್ಟಿದ್ದೇವೆ. ಹಾಗೆಯೇ ಆಂಧ್ರದವರೂ ಸಹ 5 ಟಿ.ಎಂ.ಸಿ. ನೀರನ್ನು ಅವರಿಗೆ ಕೊಟ್ಟಿದ್ದಾರೆ. ಅವರಿಗೆ ಅಷ್ಟೂ ಸಹ ಪ್ರಜ್ಞೆ ಇಲ್ಲದಿರುವುದನ್ನು ನೋಡಿ ನಮಗೆ ದಿಗ್ಭ್ರಮೆಯಾಗುತ್ತಿದೆ. ಈ ರಾಷ್ಟ್ರದಲ್ಲಿ ಇಂತಹ ಹೀನ ಕೆಲಸ ಯಾವ ರಾಜ್ಯದಿಂದಲೂ ಆಗಬಾರದು. ಈ ಹಂತದಲ್ಲಿ ನಮ್ಮ ಸರ್ಕಾರದ ದೃಷ್ಟಿ ಏನೆಂದರೆ 'ಇಂಥ ಒಂದು ವಿಚಾರವನ್ನು ನಾವು ತೀವ್ರವಾಗಿ ಪ್ರತಿಭಟಿಸುತ್ತೇವೆ, ಮಾನ್ಯ ಮುಖ್ಯಮಂತ್ರಿಯವರಾಗಲಿ, ಉಪಮುಖ್ಯಮಂತ್ರಿಯವರಾಗಲಿ ಅಂತರ್‌ರಾಜ್ಯ ಮಂಡಳಿಯ ಸಭೆಗೆ ಹೋದಾಗ ಈ ವಿಚಾರವನ್ನು ತೆಗೆದುಕೊಂಡು ತೀವ್ರವಾಗಿ ಚರ್ಚೆ ಮಾಡಿ ಇಂಥದ್ದು ಮುಂದೆ ಆಗದ ಹಾಗೆ ನೋಡಿಕೊಳ್ಳುತ್ತೇವೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಉಪಾಧ್ಯಕ್ಷರೆ, ಈ ವಿಚಾರವನ್ನು ಇಷ್ಟಕ್ಕೆ ಬಿಟ್ಟರೆ

ಆಗುವುದಿಲ್ಲ. ಇದು ಬಹಳ ಗಹನವಾದಂಥ ವಿಚಾರವಾಗಿದೆ. ಈ ವಿಚಾರದ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಮಾನ್ಯ ಪ್ರಧಾನಮಂತ್ರಿಯವರನ್ನು ಭೇಟಿ ಮಾಡಿ ಹೇಳಬೇಕಾಗುತ್ತದೆ. ಏಕೆಂದರೆ ತಮಿಳುನಾಡಿನವರು ಜಪಾನ್ ಸಂಸ್ಥೆಗೆ ಪತ್ರ ಬರೆದಿದ್ದಾರೆ. ಅದು ಬಹಳ ಗಂಭೀರವಾದ ಪ್ರಶ್ನೆ.

ಉಪಾಧ್ಯಕ್ಷರು: ಇದಕ್ಕೆ ಸಂಬಧಪಟ್ಟ ಮಂತ್ರಿಗಳು ಈಗಾಗಲೇ ಉತ್ತರ ಹೇಳಿದ್ದಾರೆ. ಮತ್ತೆ ಇದು ಗಂಭೀರವಾದ ಪ್ರಶ್ನೆ ಎಂದರೆ ಹೇಗೆ?

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳನ್ನು ಈ ವಿಚಾರದ ಬಗ್ಗೆ ಕಳುಹಿಸಿಕೊಟ್ಟರೆ ಸುಮ್ಮನೆ ಒಬ್ಬರೇ ಹೋಗಿ ಏನೋ ಮಾತನಾಡಿಕೊಂಡು ಬರುತ್ತಾರೆ. ಆದ್ದರಿಂದ ಮಾನ್ಯ ಪ್ರಧಾನಮಂತ್ರಿಯವರ ಹತ್ತಿರ ಇಲ್ಲಿಂದ ಸದನ ಸಮಿತಿಯೇ ಅಲ್ಲಿಗೆ ಹೋಗುವುದು ಒಳ್ಳೆಯದು.

SRI K.N.NAGE GOWDA: You are a senior member. You are suggesting like this. ಮಾನ್ಯ ಪ್ರಧಾನಮಂತ್ರಿಯವರನ್ನು ಖುದ್ದಾಗಿ ಭೇಟಿ ಮಾಡುವುದಕ್ಕೆ ಮಾನ್ಯ ಮುಖ್ಯಮಂತ್ರಿಯವರು ತಯಾರಾಗಿದ್ದಾರೆ. ತಮಿಳುನಾಡು ಸರ್ಕಾರದ ಮುಖ್ಯಕಾರ್ಯದರ್ಶಿಯವರು ಜಪಾನ್ ಸಂಸ್ಥೆಗೆ ಏನು ಪತ್ರ ಬರೆದಿದ್ದಾರೆ, ಅವರ ಉದ್ಧಟತನವನ್ನು ತೀವ್ರವಾಗಿ ವಿರೋಧ ಮಾಡುವುದಕ್ಕೆ ನಮ್ಮ ಸರ್ಕಾರ ತಯಾರಾಗಿದೆ. ಮಾನ್ಯ ಮುಖ್ಯಮಂತ್ರಿಯವರು ಕೂಡಲೇ ಮಾನ್ಯ ಪ್ರಧಾನಮಂತ್ರಿಯವರನ್ನು ಮೀಟ್ ಮಾಡಿ ಈ ವಿಚಾರವನ್ನು ಡೈರೆಕ್ಟ್ ಕಮ್ಯುನಿಕೇಟ್ ಮಾಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್: ಸರ್ವಪಕ್ಷಗಳ ನಿಯೋಗವನ್ನು ಸರ್ಕಾರ ಪ್ರಧಾನಮಂತ್ರಿಯವರನ್ನು ಭೇಟಿ ಮಾಡಲು ಕರೆದುಕೊಂಡು ಹೋಗಬೇಕು. ನಾನು ಧರಣಿ ಮಾಡುತ್ತೇನೆ. ಶ್ರೀ ಕರುಣಾನಿಧಿಯವರ ಸರ್ಕಾರವನ್ನು ವಜಾ ಮಾಡಬೇಕು.

(ಈ ಹಂತದಲ್ಲಿ ಶ್ರೀ ವಾಟಾಳ್ ನಾಗರಾಜ್ ರವರು ಸದನದ ಬಾವಿಯಲ್ಲಿ ಧರಣಿ ಕುಳಿತರು)

ಉಪಾಧ್ಯಕ್ಷರು: ಮಾನ್ಯ ವಾಟಾಳ್ ನಾಗರಜ್‌ರವರೇ, ತಮಗೆ ಮಾತನಾಡಲು ಅವಕಾಶ ಕೊಡುವುದು ಈ ರೀತಿ ಧರಣಿ ಮಾಡುವುದಕ್ಕಾಗಿಯೇ?

(ಗೊಂದಲ)

ಶ್ರೀ ಕೆ.ಎನ್.ನಾಗೇಗೌಡ: ಶ್ರೀಯುತರುಗಳಾದ ಕಾಗೋಡು ತಿಮ್ಮಪ್ಪನವರು ಮತ್ತು ಶ್ರೀ ವಾಟಾಳ್ ನಾಗರಾಜು ರವರು ಸಾಕಷ್ಟು ಅನುಭವವಿರತಕ್ಕಂಥ ಅತ್ಯಂತ

ಹಿರಿಯ ಸದಸ್ಯರುಗಳಾಗಿದ್ದಾರೆ. ನಾವು ಮಾನ್ಯ ಪ್ರಧಾನಮಂತ್ರಿಯವರನ್ನು ಭೇಟಿ ಆಗಿ ಈ ವಿಚಾರದ ಬಗ್ಗೆ ಮಾತನಾಡುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ: ಸರ್ವಪಕ್ಷಗಳ ಸದಸ್ಯರನ್ನು ಸರ್ಕಾರ ಮಾನ್ಯ ಪ್ರಧಾನಮಂತ್ರಿಯವರನ್ನು ಈ ವಿಚಾರದಲ್ಲಿ ಭೇಟಿ ಮಾಡಲು ಕರೆದುಕೊಂಡು ಹೋಗುವುದು ಒಳ್ಳೆಯದು.

ಶ್ರೀ ಕೆ.ಎನ್.ನಾಗೇಗೌಡ: ಮಾನ್ಯ ಉಪಾಧ್ಯಕ್ಷರೆ, ಸರ್ವಪಕ್ಷಗಳು ಸದಸ್ಯರು ಮಾನ್ಯ ಪ್ರಧಾನಮಂತ್ರಿಯವರನ್ನು ಭೇಟಿ ಮಾಡುವಂಥ ಅವಶ್ಯಕತೆ ಈಗ ಏನು ಇದೆ? ಅವಶ್ಯಕತೆ ಬಂದಾಗ ನೋಡೋಣ. ಈಗ ಮಾನ್ಯ ಮುಖ್ಯಮಂತ್ರಿಗಳು ಮಾನ್ಯ ಪ್ರಧಾನಮಂತ್ರಿಯವರನ್ನು ಭೇಟಿ ಮಾಡಿ ಬರಲಿ, ಏನಾಗುತ್ತದೆ ಎಂದು ನೋಡೋಣ.

ಶ್ರೀ ಕೆ.ಎಸ್.ಈಶ್ವರಪ್ಪ (ಶಿವಮೊಗ್ಗ): ಮಾನ್ಯ ಉಪಾಧ್ಯಕ್ಷರೆ, ಕುಡಿಯುವ ನೀರಿನ ವಿಚಾರದಲ್ಲಿ ತಮಿಳುನಾಡಿನ ಮುಖ್ಯಮಂತ್ರಿಗಳಾಗಲಿ ಅಥವಾ ಇನ್ನು ಯಾರೇ ಆಗಲಿ ರಾಜಕೀಯ ಮಾಡಲಿಕ್ಕೆ ಹೊರಟಿರುವುದು ನಿಜಕ್ಕೂ ತೀರ ಖಂಡನೀಯ. ಕರ್ನಾಟಕದಲ್ಲಿ, ಬೆಂಗಳೂರಿನಲ್ಲೂ ಕೂಡ ಅನೇಕ ಜನ ತಮಿಳು ಮಾತನಾಡುವವರು ಇದ್ದಾರೆ. ಅವರ ಕುಡಿಯುವ ನೀರಿಗೆ ಹಣ ಬಿಡುಗಡೆ ಮಾಡಬೇಡಿ ಎಂದು ಯಾರೋ ಪತ್ರ ಬರೆದರೆ ಅದಕ್ಕೆ ಅರ್ಥವೇ ಇಲ್ಲ. ಆ ರೀತಿ ಪತ್ರ ಬರೆದಿರುವುದಕ್ಕೆ ಈ ಸಭೆ ಖಂಡನೆ ಮಾಡಬೇಕು. ಅದನ್ನು ನಾನು ಒಪ್ಪುತ್ತೇನೆ. ಅದರಲ್ಲಿ ಏನೂ ಅನುಮಾನವಿಲ್ಲ. ಹಾಗಾಗಿ ಇದಕ್ಕೆ ತುಂಬಾ ಸ್ಪಷ್ಟವಾಗಿ ಎಲ್ಲರೂ ಖಂಡನೆ ಮಾಡಬೇಕು. ಮಾನ್ಯ ವಾಟಾಳ್ ನಾಗರಾಜ್ ಅವರು ಹೇಳುತ್ತಿರುವುದು ಸರಿ ಇದೆ. ಅದರ ಬಗ್ಗೆ ಸಂಬಂಧಪಟ್ಟ ಮಂತ್ರಿಗಳಿಂದಲೂ ಕೂಡ ಸ್ಪಷ್ಟನೆ ಬೇಕಾಗುತ್ತದೆ. ಇದರಲ್ಲಿ ಏನೂ ಅನುಮಾನವಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಉಪಾಧ್ಯಕ್ಷರೆ, ಈ ಕುಡಿಯುವ ನೀರಿನ ಚರ್ಚೆ ಬಂದಾಗಲೇ ನಾನು ಇದನ್ನು ಪ್ರಸ್ತಾಪ ಮಾಡಿದ್ದೆ, ಆದರೆ ಇದಕ್ಕೆ ಪ್ರತ್ಯೇಕವಾದಂಥ ಹೇಳಿಕೆಯನ್ನು ಕೊಡಲಿ ಎನ್ನುವ ದೃಷ್ಟಿಯಂದ ನಾನು ಪ್ರಸ್ತಾಪ ಮಾಡಲಿಲ್ಲ. ಇಲ್ಲ ಎಂದರೆ ಮಾನ್ಯ ಮುಖ್ಯಮಂತ್ರಿಗಳು ಬಂದಮೇಲೆ ಈ ವಿಚಾರವನ್ನು ಪ್ರಸ್ತಾಪ ಮಾಡಬೇಕೆಂದಿದ್ದೆ. ಏಕೆಂದರೆ ಇದು ಬಹಳ ಪ್ರಾಮುಖ್ಯವಾದಂಥ ವಿಷಯವಾಗಿದ್ದು, ಇದು ಇಂಟರ್‌ಸ್ಟೇಟ್ ರಿಲೇಷನ್ಸ್‌ಗೆ ಸಂಬಂಧಪಟ್ಟಿದ್ದಾಗಿರುತ್ತದೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ): ಸರ್ವ ಪಕ್ಷಗಳ ನಿಯೋಗವನ್ನು ಸರ್ಕಾರ ಕರೆದುಕೊಂಡು ಹೋಗಲೇಬೇಕು ಅದಕ್ಕಾಗಿ ನಾನು ಧರಣಿ ಹೂಡುತ್ತೇನೆ. ಅವರ ಸರ್ಕಾರವನ್ನು ವಜಾ ಮಾಡಬೇಕು. ಕರ್ನಾಟಕಕ್ಕೆ ಆಘಾತವಾಗಿದೆ. ಇದು ಕನ್ನಡಿಗರಿಗೆ ಮಾಡಿರುವ ದ್ರೋಹ.

ಉಪಾಧ್ಯಕ್ಷರು: ನಿಮಗೆ ಅವಕಾಶ ಕೊಡುವುದು ಧರಣಿ ಮಾಡುವುದಕ್ಕಾಗಿಯೇ? ತಾವು ತಮ್ಮ ಸ್ಥಳದಲ್ಲಿ ಹೋಗಿ ಕುಳಿತುಕೊಳ್ಳಿ. ಇನ್ನೂ ಚರ್ಚೆ ಮುಗಿದಿಲ್ಲ.

(ಈ ಹಂತದಲ್ಲಿ ಶ್ರೀ ವಾಟಾಳ್ ನಾಗರಾಜ್‌ರವರು ಬಾವಿಗೆ ಬಂದು ನಿಂತರು)

ಶ್ರೀ ಕೆ.ಎನ್.ನಾಗೇಗೌಡ: ಮಾನ್ಯ ಶ್ರೀ ವಾಟಾಳ್‌ರವರು, ಶ್ರೀ ಕಾಗೋಡು ತಿಮ್ಮಪ್ಪನವರು ಸಾಕಷ್ಟು ಅನುಭವವಿರುವ ಅತ್ಯಂತ ಹಿರಿಯ ಸದಸ್ಯರು. ನಿಯೋಗದ ಅವಶ್ಯಕತೆ ಈಗ ಏನು ಇದೆ? ಅವಶ್ಯಕತೆ ಬಿದ್ದಾಗ ನೋಡೋಣ. ಮೊದಲು ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿ ಬರಲಿ.

ಶ್ರೀ ಕೆ.ಎಸ್.ಈಶ್ವರಪ್ಪ (ಶಿವಮೊಗ್ಗ): ಕುಡಿಯುವ ನೀರಿನ ವಿಚಾರದಲ್ಲಿ ತಮಿಳುನಾಡಿನ ಮುಖ್ಯ ಮಂತ್ರಿಗಳಿಗಾಗಲೀ, ಯಾರೇ ಆಗಲಿ ರಾಜಕೀಯ ಮಾಡುವುದಕ್ಕೆ ಹೊರಟಿರುವುದು ತೀರಾ ಖಂಡನೀಯ. ಬೆಂಗಳೂರಿನಲ್ಲೂ ಕೂಡ ಅನೇಕ ಜನ ತಮಿಳು ಮಾತನಾಡುವವರಿದ್ದಾರೆ. ಅವರಿಗೆ ಕುಡಿಯುವ ನೀರಿನ ಬಗ್ಗೆ ಹಣ ಬಿಡುಗಡೆ ಮಾಡಬೇಡಿ ಎಂದು ಯಾರಿಗಾದರೂ ಪತ್ರ ಬರೆದರೆ ಅದಕ್ಕೆ ಅರ್ಥವೇ ಇಲ್ಲ. ಅದನ್ನು ಈ ಸಭೆ ಖಂಡಿಸಬೇಕು. ಅದನ್ನು ನಾನೂ ಒಪ್ಪುತ್ತೇನೆ. ಹಾಗಾಗಿ, ತುಂಬಾ ಸ್ಪಷ್ಟವಾಗಿ ನಾವೆಲ್ಲರೂ ಕೂಡ ಇದನ್ನು ಖಂಡಿಸಬೇಕು. ಶ್ರೀ ವಾಟಾಳ್‌ರವರು ಹೇಳುತ್ತಿರುವುದು ಸರಿಯಿದೆ. ಅದರ ಬಗ್ಗೆ ಮಂತ್ರಿಗಳು ಸ್ಪಷ್ಟನೆ ಕೊಡಬೇಕಾಗುತ್ತದೆ.

ಶ್ರೀ ಮಲ್ಲಿಕಾರ್ಜುನ ಎಂ.ಖರ್ಗೆ (ವಿರೋಧಪಕ್ಷದ ನಾಯಕರು): ಕುಡಿಯುವ ನೀರಿನ ಚರ್ಚೆ ಬಂದಾಗ ನಾನು ಪ್ರಸ್ತಾಪ ಮಾಡಿದ್ದೆ. ಆದರೆ, ಇದಕ್ಕೆ ಪ್ರತ್ಯೇಕವಾದ ಹೇಳಿಕೆಯನ್ನು ಅವರು ಕೊಡಲೆನ್ನುವ ದೃಷ್ಟಿಯಿಂದ ಇದನ್ನೆತ್ತಲಿಲ್ಲ. ಮುಖ್ಯ ಮಂತ್ರಿಗಳು ಬಂದ ಮೇಲೆ ಇದನ್ನೆತ್ತಬೇಕು ಎಂದು ಮಾಡಿದ್ದೆ. ಏಕೆಂದರೆ, ಇದು ಫ್ರಾಮುಖ್ಯವಾದ ವಿಷಯ ಮತ್ತು ಇಂಟರ್-ಸ್ಟೇಟ್ ರಿಲೇಷನ್ಸ್‌ಗೆ ಸಂಬಂಧಪಟ್ಟಿದ್ದು. ಪ್ರತಿಯೊಂದು ರಾಜ್ಯಗಳೂ ಇದೇ ರೀತಿ ವರ್ತನೆ ಮಾಡಿಕೊಂಡು ಹೋದರೆ ಈ ದೇಶದಲ್ಲಿ ಫೆಡರಲ್ ಸ್ಟ್ರಕ್ಚರ್ ಹಾಳಾಗುತ್ತದೆ. ಇಂಡಿಪೆಂಡೆಂಟ್ ಆಗಿ ಘೋಷಣೆ ಮಾಡಿಕೊಂಡು ನಮ್ಮ ನಮ್ಮ ರಾಜ್ಯ ಬೇರೆ, ನಮ್ಮ ನೀರು ಬೇರೆ, ನಮ್ಮ ರಿಸೋರ್ಸಸ್ ಬೇರೆ ಎಂದು ಹೇಳಿಕೊಂಡು ಹೋಗಬೇಕಾಗುತ್ತದೆ. ಅದಕ್ಕಾಗಿ, ಇದಕ್ಕೇನಾದರೂ ಕಡಿವಾಣ ಹಾಕಬೇಕು. ಇಂಥ ಪತ್ರಗಳನ್ನು ಯಾವುದೇ ರಾಜ್ಯಗಳೂ ಬರೆಯಬಾರದು. ಇವತ್ತು ಇವರು ಬರೆದರು. ನಾಳೆ ಕೃಷ್ಣ ಬೇಸಿನ್‌ನಲ್ಲಿ ಏನಾದರೂ ಬಂದರೆ ಮಹಾರಾಷ್ಟ್ರದವರು ಬರೆಯಬಹುದು, ಆಂಧ್ರಪ್ರದೇಶದವರು ಬರೆಯಬಹುದು. ನಾವೇನು ತಿಳಿದುಕೊಂಡಿದ್ದೇವೆ, ಕೇಂದ್ರದಲ್ಲಿ ಒಂದು ಸರ್ಕಾರವಿದೆ, ನಾವು ನೇರವಾಗಿ ಅದನ್ನು ಅಪ್ರೋಚ್ ಮಾಡಬೇಕು, ಅವರೇನು ಮಾಡುತ್ತಾರೆ ಅದರ ಮುಖಾಂತರ ಅದಂಥದ್ದು ನಮ್ಮ ಇಡೀ ರಾಜ್ಯಗಳಿಗೆ ಆಗಬೇಕು ಎಂಬುದು. ಆದರೆ, ಇವರು ನೇರವಾಗಿ ಓಇಸಿಎಫ್‌ಗೆ 4ನೇ ಹಂತದ ನೀರು ಸರಬರಾಜು ಪ್ರಾಜೆಕ್ಟ್‌ಗೆ ಕೊಡತಕ್ಕಂಥ

804 ಕೋಟಿ ರೂಪಾಯಿಗಳನ್ನು ಕೊಡಬಾರದೆನ್ನುವ ಬಗ್ಗೆ ಪತ್ರ ಬರೆದಿರುವುದು ಸರಿಯಲ್ಲ. ಅದನ್ನು ನಮ್ಮ ಮುಖ್ಯಮಂತ್ರಿಗಳು ಖಂಡಿಸಿದ್ದಾರೆ. ಅದನ್ನು ಒಪ್ಪಿಕೊಳ್ಳೋಣ. ಆದರೆ, ಈ ಘಟನೆಗಳು ರಿಪೀಟ್ ಆಗಬಾರದು. ಇಂಥ ಪತ್ರಗಳು ಯಾರೇ ನೇರವಾಗಿ ಬೇರೆ ಏಜೆನ್ಸಿಗಳಿಗೆ ಬರೆದರೆ, ಬೇರೆ ದೇಶದವರಿಗೆ ಬರೆದರೆ ಅವರ ಮೇಲೆ ಕಠಿಣವಾದ ಕ್ರಮವನ್ನು ಕೇಂದ್ರಸರ್ಕಾರದವರು ಜರುಗಿಸಬೇಕು ಮತ್ತು ಇಂಥ ಸರ್ಕಾರಗಳು ಇನ್ನು ಮುಂದೆ ಈ ರೀತಿ ಮಾಡದ ರೀತಿಯಲ್ಲಿ ಹೋಂ ಡಿಪಾರ್ಟ್‌ಮೆಂಟ್ ನಡೆದುಕೊಳ್ಳಬೇಕು.

ಶ್ರೀ ಎನ್.ರಾಜಣ್ಣ (ಭಾರತೀನಗರ): ಚುಕ್ಕೆ ಗುರುತಿನ ಪ್ರಶ್ನೆ ಸಂ: 1233ರಲ್ಲಿ ನಾನು, ಕಾವೇರಿಯಿಂದ ಹೆಚ್ಚು ಪ್ರಮಾಣದ ನೀರನ್ನು ಪಡೆಯುವುದಕ್ಕೆ ಕೈಗೊಂಡ ಕ್ರಮಗಳೇನು ಎಂದು ಕೇಳಿದ್ದಕ್ಕೆ, ದಿನವಹಿ 27 ಮಿಲಿಯನ್ ಗ್ಯಾಲನ್ ನೀರು ಸರಬರಾಜು ಮಾಡಲು ಫೇಸ್ (-1) ಯೋಜನೆಯಲ್ಲಿ ಕೆಲಸ ಪ್ರಾರಂಭವಾಗಿದೆ ಎಂದು ತಿಳಿಸಿದ್ದಾರೆ. ನಾವು ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡು ಬೆಂಗಳೂರು ನಗರಕ್ಕೆ 4ನೇ ಸ್ಟೇಜ್‌ನಲ್ಲಿ ನೀರು ತರುವುದಕ್ಕೆ ಎಲ್ಲಾ ಪ್ರಯತ್ನ ಮಾಡುತ್ತಿದ್ದೇವೆಂದು ಶ್ರೀ ಅನಂತನಾಗ್‌ರವರು ಹೇಳಿದರು. ಕಾನ್‌ಸ್ಟಿಟ್ಯೂಷನ್ ಪ್ರಕಾರ, ಯಾವುದೇ ರಾಜ್ಯಕ್ಕೆ ಕುಡಿಯುವ ನೀರಿಗೆ ಅಡಚಣೆ ಮಾಡಬಾರದು. ಎರಡನೆಯದಾಗಿ, ಬೆಂಗಳೂರಿನಲ್ಲೂ ತಮಿಳು ಮಾತನಾಡುವವರೂ ಕೂಡ 10-20 ಲಕ್ಷ ಜನ ಇದ್ದಾರೆ. ಭಾರತದಲ್ಲಿ 27 ರಾಜ್ಯಗಳಿವೆ, ಆ ಭಾಷೆ ಮಾತನಾಡುವವರೆಲ್ಲರೂ ಬೆಂಗಳೂರಿನಲ್ಲಿದ್ದಾರೆ. ಕೇಂದ್ರ ಸರ್ಕಾರ ಇನ್ನು ಮುಂದೆ ನಮಗೆ ಅಪ್ಪಣೆ ಕೊಡಬೇಕು, ಅವರು ಏನು ಪತ್ರ ಬರೆದಿದ್ದಾರೆ, ಅವರು ತಪ್ಪು ಒಪ್ಪಿಗೆ ಕೊಡಬೇಕು. ಜಪಾನ್ ಸಂಸ್ಥೆಗೆ ಬರೆದದ್ದು ತಪ್ಪಾಗಿದೆ ಎಂದು ನಮಗೆ ತಿಳಿಸಬೇಕು.

ಶ್ರೀ ಕೆ.ಎನ್.ನಾಗೇಗೌಡ: ಇಲ್ಲಿ ತಮಿಳು ಮಾತನಾಡುವವರು ವಾಸಿಸುತ್ತಾರೆ, ಕನ್ನಡಿಗರು ವಾಸ ಮಾಡುತ್ತಾರೆಂಬುದು ಮುಖ್ಯವಲ್ಲ. ನಮಗೆ ಬೇಕಾಗಿರುವುದು ಬೆಂಗಳೂರು ನಗರಕ್ಕೆ ಕುಡಿಯುವ ನೀರಿನ ವ್ಯವಸ್ಥೆ. ಕಾವೇರಿ ವಿವಾದಕ್ಕೂ, ಇದಕ್ಕೂ ಲಿಂಕ್ ಮಾಡುವುದಕ್ಕೆ ಬರುವುದಿಲ್ಲ, ಸಾಧ್ಯವೂ ಇಲ್ಲ, ಮಾಡಕೂಡದು ಎನ್ನುವ ಬಗ್ಗೆ ಮಂತ್ರಿಮಂಡಲದಲ್ಲಿ ಬಹಳ ಕಾಲ ಚರ್ಚೆ ಮಾಡಿ ನಾವು ವಾಟರ್ ರಿಸೋರ್ಸಸ್‌ನಿಂದ ಬಂದಿರುವ ಕಾಗದದ ಬಗ್ಗೆ ಮತ್ತು ಓಇಸಿಎಫ್‌ನಿಂದ ಬಂದಿರುವ ಕಾಗದದ ಬಗ್ಗೆ ಸುದೀರ್ಘವಾಗಿ ಚರ್ಚಿಸಿ ಮುಖ್ಯಮಂತ್ರಿಗಳು ಬಹಳ ಕಟುವಾದ ಭಾಷೆಯಲ್ಲಿ ಪ್ರಧಾನಿಗಳಿಗೆ ಪತ್ರ ಬರೆದಿದ್ದಾರೆ. ಶ್ರೀ ಈಶ್ವರಪ್ಪ ಮತ್ತು ಶ್ರೀ ವಾಟಾಳ್‌ರವರು, ಶ್ರೀ ಖರ್ಗೆಯವರು ಕೇಳುತ್ತಿರುವುದು ಒಂದು ನಿಯೋಗ ಹೋಗಬೇಕೆಂದು. ನಿಯೋಗದ ಅವಶ್ಯಕತೆ ಇದ್ದರೆ, ಮುಖ್ಯಮಂತ್ರಿಗಳ ಜೊತೆ ಸಮಾಲೋಚನೆ ಮಾಡಿ ನಿಯೋಗ ಕರೆದುಕೊಂಡು ಹೋಗಲು ಪ್ರಯತ್ನಿಸುತ್ತೇನೆ.

(ಈ ಹಂತದಲ್ಲಿ ಶ್ರೀ ವಾಟಾಳ್ ನಾಗರಾಜ್‌ರವರು ಬಾವಿಯಿಂದ ತಮ್ಮ ಸ್ಥಾನಕ್ಕೆ ಹಿಂತಿರುಗಿದರು)

(5) ವಿತ್ತೀಯ ಕಾರ್ಯಕಲಾಪ ಬೇಡಿಕೆಗಳ ಮೇಲಿನ ಚರ್ಚೆ: ಬೇಡಿಕೆ ಸಂಖ್ಯೆ 28, 29, 52 ಮತ್ತು 53.

+ ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ನಾನು ವೈದ್ಯಕೀಯ ಶಿಕ್ಷಣ ಮತ್ತು ಆರೋಗ್ಯಗಳ ಇಲಾಖೆಗಳ ಬೇಡಿಕೆ ಮೇಲೆ ಮಾತನಾಡಲು ಇಚ್ಛಿಸುತ್ತೇನೆ. ಸರ್ವರಿಗೂ ಆರೋಗ್ಯವನ್ನು ಕೊಡಬೇಕೆಂಬುದು ವರ್ಲ್ಡ್ ಬ್ಯಾಂಕ್ 1948ರಲ್ಲಿ ತೆಗೆದುಕೊಂಡ ನಿರ್ಣಯ. ಇಡೀ ಜಗತ್ತಿನಲ್ಲಿರುವ ಪ್ರತಿಯೊಬ್ಬ ಮನುಷ್ಯನಿಗೂ ಕನಿಷ್ಠ ಆರೋಗ್ಯ ಸೌಕರ್ಯವನ್ನು ಕೊಡಬೇಕು ಎಂಬುದು ಎಲ್ಲಾ ದೇಶದ ನಾಗರಿಕ ಸರ್ಕಾರಗಳ ಮೊಟ್ಟಮೊದಲನೆ ಕರ್ತವ್ಯವೆಂದು ಹೇಳುವುದನ್ನು ನಾವೆಲ್ಲರೂ ಒಪ್ಪಿದ್ದೇವೆ. ಅದಕ್ಕೆ ಸಹಿ ಮಾಡಿರುವ ದೇಶಗಳಲ್ಲಿ ಭಾರತವೂ ಒಂದು. ಈ ಘೋಷಣೆಯಾಗಿ 60 ವರ್ಷಗಳಾಗುತ್ತಿವೆ. ಕರ್ನಾಟಕ ರಾಜ್ಯದ ಪರಿಸ್ಥಿತಿಯನ್ನು ನಾವು ನೋಡಿದರೆ, ಇವತ್ತಿಗೂ ಕೂಡ ಕರ್ನಾಟಕ ರಾಜ್ಯದ ಒಟ್ಟು ಜನಸಂಖ್ಯೆಯ ಶೇ.60 ಭಾಗಕ್ಕೆ ಆಧುನಿಕ ವೈದ್ಯಕೀಯ ಸೌಲಭ್ಯ ದೊರಕಿಸಲು ಸಂಪೂರ್ಣವಾಗಿ ವಿಫಲರಾಗಿದ್ದೇವೆ. ಸ್ವಾತಂತ್ರ್ಯ ಬಂದು 50 ವರ್ಷಗಳ ನಂತರವೂ ಈ ಪರಿಸ್ಥಿತಿ ಈ ದೇಶದಲ್ಲಿ ನಿರ್ಮಾಣವಾಗಿದೆ. ನಾನು ತಮ್ಮ ಮುಖಾಂತರ ಇವತ್ತು ಆರೋಗ್ಯ ಸಚಿವರನ್ನು ಕೇಳುವುದೇನೆಂದರೆ, ಸಂಪೂರ್ಣವಾಗಿ ಎಲ್ಲಾ ರೀತಿಯ ಸಲಕರಣೆಗಳು, ಡಾಕ್ಟರು, ನರ್ಸ್, ಫ್ಯೂನ್ಸ್, ಅಟೆಂಡರ್ ಅಂದರೆ ಒಂದು ಆಸ್ಪತ್ರೆಗೆ ಬೇಕಾಗಿರುವ ಸವಲತ್ತುಗಳನ್ನು ಒದಗಿಸಿರುವ ಒಂದೇ ಒಂದು ಆಸ್ಪತ್ರೆಯೂ ಕರ್ನಾಟಕ ರಾಜ್ಯದಲ್ಲಿಲ್ಲ. ಇದ್ದರೆ ಹೇಳಲಿ. ನಿಯಮಾವಳಿ ಪ್ರಕಾರ ಇರುವ, ಎಲ್ಲಾ ಸೌಲಭ್ಯಗಳನ್ನೂ ಆಯಾಯ ಆಸ್ಪತ್ರೆಗಳಿಗೆ ಒದಗಿಸಿದ್ದೇವೆನ್ನುವುದು ಇಡೀ ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಇಲ್ಲ. ಅಂದರೆ, ಇಂಥ ವೈದ್ಯಕೀಯ ವ್ಯವಸ್ಥೆಯನ್ನು ನಾವು ಇಟ್ಟುಕೊಂಡಿದ್ದೇವೆ. ಕರ್ನಾಟಕ ರಾಜ್ಯದಲ್ಲಿರುವ ಆಸ್ಪತ್ರೆಗಳಿಗೆ ನೀವು ಹೋದರೆ, ಪ್ರತ್ಯೇಕವಾಗಿ ಹಳ್ಳಿಗಾಡಿನಲ್ಲಿರುವ ಆಸ್ಪತ್ರೆಗಳಿಗೆ ನಾವೇನಾದರೂ ಹೋದರೆ ಆಸ್ಪತ್ರೆ ಇರುತ್ತದೆ, ಡಾಕ್ಟರ್ ಇರುವುದಿಲ್ಲ, ಡಾಕ್ಟರ್ ಇದ್ದರೆ, ನರ್ಸ್ ಇರುವುದಿಲ್ಲ, ನರ್ಸ್ ಇದ್ದರೆ ಅಟೆಂಡರ್ ಇರುವುದಿಲ್ಲ, ಅವರೆಲ್ಲರೂ ಇದ್ದರೆ ಸಿರೇಂಜ್ ಇರುವುದಿಲ್ಲ, ಸಿರೇಂಜ್ ಇದ್ದರೆ ಸ್ಪಿರಿಟ್ ಇರುವುದಿಲ್ಲ, ಬ್ಯಾಂಡೇಜ್ ಬಟ್ಟೆ ಇರುವುದಿಲ್ಲ. ಯಾವುದೇ ರೀತಿಯ ಕನಿಷ್ಠ ಮೂಲಭೂತ ಸೌಲಭ್ಯಗಳು ಏನೊಂದು ಆಸ್ಪತ್ರೆಯಲ್ಲಿರಬೇಕೋ ಆ ರೀತಿಯ ಯಾವ ಸೌಲಭ್ಯಗಳೂ ಕೂಡ ಇವತ್ತು ನಮ್ಮ ಕರ್ನಾಟಕ ರಾಜ್ಯದ ಆಸ್ಪತೆಗಳಲ್ಲಿಲ್ಲದ ವ್ಯವಸ್ಥೆ ಇದೆ. ಆದರೆ, ಇದೇ ಸಂದರ್ಭದಲ್ಲಿ ಇನ್ನೊಂದು ಕಡೆ ಏನಾಗುತ್ತಿದೆ ಎಂದರೆ, ಹೈ-ಟೆಕ್ ಹೆಲ್ತ್ ಪ್ರಾವಿಷನ್‌ಗಳು ಈ ರೀತಿಯಲ್ಲಿ ಬೆಳೆಯುತ್ತಿವೆ. ಅಂದರೆ, ಶ್ರೀಮಂತ ವರ್ಗಕ್ಕೆ